ಖಾಸಗಿ ಪ್ರಸಾರಕ್ಕಾಗಿ

# ಅಲೆಗಳು

ತ್ರೈ ಮಾಸಿಕ ಪತ್ರಿಕೆ

ಸಂಚಿಕೆ 38

ಏಪ್ರಿಲ್ -ಜೂನ್ 2017




ಸೃಷ್ಟಿಯ ಕಿರೀಟ ಎನಿಸಿಕೊಂಡ ಮನುಷ್ಯ
ದೇವರ ಸೃಷ್ಟಿಯ ಭಾಗವಾದ ಪರಿಸರ (ಅರಣ್ಯ)ವನ್ನು
ರಕ್ಷಿಸುವ ಹೊಣೆ ವಹಿಸಬೇಕು



**ಮುಖ್ಯ ಸಂಪಾದಕರು**

**ಫಾ. ಸೆಬಾಸ್ಟಿಯನ್ ಫರ್ನಾಂಡಿಸ್**

**ಒಳ ಪುಟಗಳಲ್ಲಿ :**



- ಅರಣ್ಯ ರಕ್ಷಣೆ – ನಮ್ಮ ಹೊಣೆ
- ಹವಾಮಾನ ಬದಲಾವಣೆ ಮತ್ತು ಜಾಗತಿಕ ತಾಪಮಾನ ಏರಿಕೆ
- ಶುಚಿತ್ವ ಕ್ರಾಂತಿಗೆ ಮುನ್ನುಡಿ ಬರೆದ ರಾಗಿಮುದ್ದನಹಳ್ಳಿಯ ಚೈತನ್ಯ ಮಹಿಳಾ ಮಹಾಸಂಘ
- ವಾರ್ತಾ ವಿಶೇಷ


**ಮುಖಪುಟ ವಿನ್ಯಾಸ**

**ಅನೂಷ ಗ್ರಾಫಿಕ್ಸ್**

## ಓದುಗರೊಂದಿಗೆ ಕ್ಷಣ ಹೊತ್ತು.......

ಆತ್ಮೀಯರೇ.......



**"ಈ ಭೂಮಿಯು ಪ್ರತಿಯೊಬ್ಬರ ಅವಶ್ಯಕತೆಗಳನ್ನು ಪೂರೈಸುವಷ್ಟು ಶಕ್ತವಾಗಿದೆಯೇ ಹೊರತು ಪ್ರತಿಯೊಬ್ಬರ ದುರಾಸೆಯನ್ನಲ್ಲ"** – ಮಹಾತ್ಮಾ ಗಾಂಧಿ.

ಜೂನ್ 05, ವಿಶ್ವ ಪರಿಸರ ದಿನ. ಪರಿಸರ ಸಂರಕ್ಷಣೆಯಿಂದ ಮಾತ್ರ ಮಾನವನ ಅಭಿವೃದ್ಧಿ ಸುಸ್ಥಿರವಾಗುವುದೆಂದು 1972ರ ಜೂನ್ 5ರಂದು ಸ್ವೀಡನ್ನಿನ ಸ್ಟಾಕ್‌ಹೋಮ್‌ನಲ್ಲಿ ನಡೆದ ಶೃಂಗ ಸಭೆ ಅಭಿಪ್ರಾಯಪಟ್ಟಿತು. ಇದರ ನೆನೆಪಿಗಾಗಿ ಪ್ರತಿ ವರ್ಷ ಈ ದಿನವನ್ನು ಪರಿಸರ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸಲು ವಿಶ್ವ ಪರಿಸರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಜೊತೆಗೆ ವನಮಹೋತ್ಸವ ಹಾಗೂ ವನ್ಯಜೀವಿ ಸಪ್ತಾಹಗಳನ್ನು ಆಚರಿಸಲಾಗುತ್ತಿದೆ. ಇವುಗಳ ಮುಖ್ಯ ಉದ್ದೇಶ ಪರಿಸರದ ಅಂಗಗಳಾದ ಗಾಳಿ, ನೀರು, ಮಣ್ಣು, ಸಸ್ಯ ಹಾಗೂ ಪ್ರಾಣಿಗಳ ಮಹತ್ವ ಮತ್ತು ಅವುಗಳ ಸಂರಕ್ಷಣೆ ಮಾಡುವ ಬಗ್ಗೆ ಸಮಾಜದ ಎಲ್ಲಾ ವರ್ಗಗಳಿಗೂ ಅರಿವು ಮೂಡಿಸುವುದು. ಪರಿಸರ ಮಾನವ ಮತ್ತು ಇತರ ಜೀವಿಗಳು ವಾಸಿಸುವ ಯಾವುದೇ ಪ್ರದೇಶದ ಸುತ್ತಮುತ್ತಲಿನ ಆವರಣವೆ ಅವುಗಳ ಪರಿಸರ. ನೆಲ, ಜಲ, ವಾಯು, ಆಕಾಶ, ಬೆಟ್ಟ ಗುಡ್ಡ, ಕಾಡು ಮೇಡುಗಳು, ಕೆರೆಕಟ್ಟೆ, ನದಿ ಸರೋವರ, ಸಸ್ಯರಾಶಿ, ಪ್ರಾಣಿವರ್ಗ ಇವುಗಳನ್ನೆಲ್ಲಾ ಒಳಗೊಂಡ ವಾತಾವರಣವನ್ನೆ 'ಪರಿಸರ' ಎಂದು ಕರೆಯಬಹುದು. ಪಂಚ ಮಹಾ ಭೂತಗಳಾದ ಗಾಳಿ, ನೀರು, ಬೆಳಕು (ಬೆಂಕಿ), ನೆಲ (ಮಣ್ಣು) ಆಕಾಶಗಳಿರುವ ನಮ್ಮ ಪರಿಸರ ಜೀವಿಗಳ ಅಸ್ತಿತ್ವಕ್ಕೆ ಆಧಾರ ಮತ್ತು ಬದುಕಿಗೆ ಆಸರೆ. ಆದ್ದರಿಂದಲೆ ನಾವು ವಾಸಿಸುವ ಭೂಮಿಯನ್ನು ಜೀವಂತ ಗ್ರಹ ಎಂದು ಕರೆಯುವುದು.

ಸಕಲ ಜೀವಕೋಟಿಯ ಅಸ್ತಿತ್ವಕ್ಕೆ ಅಗತ್ಯವಾದ ಪರಿಸರ ಸಮತೋಲನವನ್ನು ಅರಣ್ಯಗಳು ಸದಾ ಕಾಪಾಡುತ್ತವೆ. ವೃಕ್ಷಗಳು ಗಾಳಿಯಲ್ಲಿರುವ ಇಂಗಾಲದ ಡೈ ಆಕ್ಸೈಡ್‌ನ್ನು ತಮ್ಮ ದ್ಯುತಿ ಸಂಶ್ಲೇಷಣ ಕ್ರಿಯೆಯಲ್ಲಿ ಉಪಯೋಗಿಸಿಕೊಂಡು ಮಾನವರು ಹಾಗೂ ಪ್ರಾಣಿಗಳು ಉಸಿರಾಡಲು ಅತ್ಯವಶ್ಯಕವಾದ ಪ್ರಾಣವಾಯುವಾದ ಆಮ್ಲಜನಕವನ್ನು ಬಿಡುಗಡೆ ಮಾಡುತ್ತವೆ. ಒಂದು ದೊಡ್ಡ ವೃಕ್ಷ ಸುಮಾರು 2500 ರಿಂದ 3000 ಜನರಿಗೆ ಬೇಕಾಗುವಷ್ಟು ಆಮ್ಲಜನಕವನ್ನು ನೀಡುತ್ತದೆ. ಯಾವ ವೆಚ್ಚ ಇಲ್ಲದೆ, ಶುದ್ಧ ಹಾಗೂ ತಂಪಾದ ಗಾಳಿ ವೃಕ್ಷಗಳಿಂದ ದೊರೆಯುತ್ತದೆ. ಅಲ್ಲದೆ, ಜಲಮಾಲಿನ್ಯ, ವಾಯುಮಾಲಿನ್ಯ, ಶಬ್ದಮಾಲಿನ್ಯ ಪರಿಸರ ಮಾಲಿನ್ಯಗಳನ್ನು ತಡೆಗಟ್ಟುತ್ತವೆ. ಅಗಲವಾದ ಎಲೆಗಳುಳ್ಳ ವೃಕ್ಷಗಳು ಶಬ್ದದ ತರಂಗಗಳನ್ನು ಹೀರಿಕೊಂಡು ಶಬ್ದಮಾಲಿನ್ಯ ಕಡಿಮೆ ಮಾಡಿ ನಮ್ಮ ಶ್ರವಣಾಂಗಗಳನ್ನು ರಕ್ಷಿಸುತ್ತವೆ.

ಹಸಿರು–ಪರಿಸರದ ರೂಪದಲ್ಲಿರುವ ಅರಣ್ಯ, ಮರ, ಗಿಡ ಹಾಗೂ ಬೆಳೆಗಳು ಇರುವುದೇ ಭೂಮಿಯಲ್ಲಿರುವ ಸಕಲ ಜೀವಿಗಳಿಗೆ ಆಶ್ರಯ, ಆಹಾರ ಹಾಗೂ ವಾತಾವರಣ ನೀಡಿ ಜೀವ ಚಕ್ರವನ್ನು ಮುಂದುವರಿಸಿವೆ. ಹಸಿರು ಪರಿಸರಗಳು ಇಂಗಾಲದ ಸಿಂಕ್‌ಗಳಾಗಿ ಇಂಗಾಲ ಪ್ರತ್ಯೇಕೀಕರಣ ಮಾಡಿ ವಾಯು ಮಾಲಿನ್ಯ ತಡೆದು, ಹಸಿರು ಮನೆ ಅನಿಲಗಳಿಂದ ಜಾಗತಿಕ ತಾಪಮಾನ ಹೆಚ್ಚಾಗದಂತೆ ಮಾಡಿ, ಮಾನವ ಹಾಗೂ ಇತರ ಜೀವಿಗಳು ಬದುಕಲು ಸರ್ವ ರೀತಿಯಲ್ಲಿಯೂ ಪ್ರಯೋಜನವಾಗುತ್ತಿದೆ. ಅರಣ್ಯ ಪ್ರದೇಶಗಳನ್ನು ಹಾಗೂ ಮರಗಿಡಗಳನ್ನು ಅಕ್ರಮ ಕಡಿತಲೆ, ಬೆಂಕಿ, ಒತ್ತುವರಿ, ಮೇಯಿಸುವಿಕೆಯಿಂದ ತಡೆಗಟ್ಟಿ, ಅವುಗಳನ್ನು ಸಂರಕ್ಷಿಸಬೇಕು.

ಹೆಚ್ಚು ಸಸಿಗಳನ್ನು ಬೆಳೆಸಿ ಖಾಲಿ ಇರುವ ಎಲ್ಲಾ ಹಳ್ಳಿಗಳು ಹಾಗೂ ನಗರಗಳ ಜಾಗಗಳಲ್ಲೂ ನೆಡುತೋಪುಗಳನ್ನು ನಿರ್ಮಿಸಿ, ಹಸಿರು ಪರಿಸರವನ್ನು ಹೆಚ್ಚಿಸಬೇಕು. ಅರಣ್ಯ ಮತ್ತು ವನ್ಯಜೀವಿಗಳ ಮಹತ್ವ ಹಾಗೂ ಪರಿಸರ ಸಂರಕ್ಷಣೆಯ ಬಗ್ಗೆ ಸಮಾಜದ ಪ್ರತಿಯೊಬ್ಬರಿಗೂ ಅರಿವು ಮೂಡಿಸಬೇಕು. ಶಾಲಾ ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು, ಮಹಿಳೆಯರು, ಜನಪ್ರತಿನಿಧಿಗಳು ಹಾಗೂ ಎಲ್ಲಾ ಸಾರ್ವಜನಿಕರಿಗೆ ಪರಿಸರದ ಬಗ್ಗೆ ವನಮಹೋತ್ಸವ ಆಚರಣೆಯ ಮೂಲಕ ಒಲವು ಮತ್ತು ಆಸಕ್ತಿ ಬರುವಂತೆ ಮಾಡಬೇಕು.


**ಫಾ. ಸೆಬಾಸ್ಟಿಯನ್ ಫರ್ನಾಂಡಿಸ್**

**ನಿರ್ದೇಶಕರು, ಕ್ರಾಸ್ ಸಂಸ್ಥೆ, ಬೆಂಗಳೂರು**

# ಅರಣ್ಯ ರಕ್ಷಣೆ – ನಮ್ಮ ಹೊಣೆ

ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು 1972ರ ಜೂನ್ 5 ರಂದು ಸಭೆ ನಡೆಸಿ ಜಾಗತಿಕ ತಾಪಮಾನದಲ್ಲಿನ ಏರುಪೇರು, ನೈಸರ್ಗಿಕ ವಿಪತ್ತುಗಳು ಮತ್ತು ಅದಕ್ಕೆ ಕಾರಣಗಳು, ಸಂಪನ್ಮೂಲ ಕ್ಷಮತೆ ಮುಂತಾದ ವಿಷಯಗಳ ಬಗ್ಗೆ ಬಹಳ ಆಳವಾಗಿ ಚರ್ಚಿಸಲಾಯಿತು. ವಿಶ್ವಸಂಸ್ಥೆಯಲ್ಲಿ ನಡೆದ ಈ ಸಭೆ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಪರಿಸರ ಸಂರಕ್ಷಣೆಗೆ ಪಣತೊಟ್ಟು ಪರಿಸರ ಕಾಳಜಿಗಾಗಿ ಹಾಗೂ ವಿಶ್ವದ ಉಳಿವಿಗಾಗಿ ಅದರ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಒಂದು ದಿನವನ್ನು ಮೀಸಲಿಟ್ಟು ಪ್ರತಿವರ್ಷ ಜೂನ್ 5 ರಂದು ವಿಶ್ವ ಪರಿಸರ ದಿನವನ್ನು ಆಚರಿಸುವ ದೃಢ ನಿರ್ಧಾರವನ್ನು ಕೈಗೊಂಡಿತು. ಅದರ ಪರಿಣಾಮವಾಗಿ 1973ರಿಂದ ಪ್ರತಿ ವರ್ಷ ಜೂನ್ 5 ರಂದು ವಿಶ್ವ ಪರಿಸರ ದಿನವನ್ನಾಗಿ ವಿಶ್ವಾದ್ಯಂತ ಆಚರಿಸಲಾಗುತ್ತಿದೆ. ಈ ಬಾರಿಯ ದಿನಾಚರಣೆಯು 44ನೇ ಪರಿಸರ ದಿನವಾಗಿದೆ.

ಭಾರತದ ಅರಣ್ಯಗಳಲ್ಲಿರುವ ವೈವಿಧ್ಯತೆ ಅದ್ಭುತವಾಗಿರುವಂತಹದ್ದು. ಲಕ್ಷಾಂತರ ಪ್ರಭೇದಗಳ ಗಿಡ ಮರಗಳು, ಕೀಟ, ಪಕ್ಷಿಗಳು, ವನ್ಯಮೃಗಗಳು... ಅದೊಂದು ವಿಶಿಷ್ಟಲೋಕ. ಪರಿಸರದ ಅಂಗಗಳಾದ ಗಾಳಿ, ನೀರು, ಮಣ್ಣು, ಸಸ್ಯ, ಮತ್ತು ಪ್ರಾಣಿಗಳು ಪರಿಸರ ಸಮತೋಲನೆಯಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಅರಣ್ಯಗಳು, ಮರಗಿಡಗಳು, ತೋಟಗಾರಿಕೆ ಹಾಗೂ ಕೃಷಿ ಬೆಳೆಗಳ ಸಸ್ಯರಾಶಿಗಳೇ ಹಸಿರು ಪರಿಸರ. ಪರಿಸರ ಸಂರಕ್ಷಣೆ ಎಂದರೆ ಮುಖ್ಯವಾಗಿ ನಾವು ಬದುಕುತ್ತಿರುವ ಭೂಮಿಯ ಎಲ್ಲೆಡೆಯೂ ಇರುವ ಹಸಿರನ್ನು ಜೋಪಾನವಾಗಿ ಕಾಪಾಡಿಕೊಳ್ಳುತ್ತಾ, ಅಧಿಕ ಹಸಿರು ಬೆಳೆಸುವ ಕಾರ್ಯ. ಈ ನಿಟ್ಟಿನಲ್ಲಿ ಅರಣ್ಯವನ್ನು ಇನ್ನಷ್ಟು ಬೆಳೆಸುವುದು ಬಲು ಮಹತ್ವದ್ದು ಮತ್ತು ಮನುಕುಲದ ಮೊದಲ ಕರ್ತವ್ಯವೂ ಆಗಿದೆ. ಜಗತ್ತಿನಾದ್ಯಂತ ಅರಣ್ಯ ಬೆಳೆಸುವುದಕ್ಕೆ ಮೊದಲ ಆದ್ಯತೆ ನೀಡಲಾಗಿದೆ.

## ಯಾಕೆ ಅರಣ್ಯ ರಕ್ಷಣೆ ಮಾಡಬೇಕು?

ಅರಣ್ಯ ಎಂಬ ಅದ್ಭುತ ಲೋಕದ ಸಂರಕ್ಷಣೆಯ ಬಗ್ಗೆ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಕಳಕಳಿ ಇದ್ದುದನ್ನು ನಾವು ನೋಡಬಹುದು. ಒಟ್ಟು ಭೂಪ್ರದೇಶದ ಮೂರನೇ ಒಂದು ಭಾಗದಷ್ಟು ನೆಲದಲ್ಲಿ ಅರಣ್ಯವಿರಬೇಕೆಂಬ ಆಶಯಕ್ಕೆ ಸ್ವತಂತ್ರ ಭಾರತ ಆರಂಭದಿಂದಲೂ ಪುಷ್ಟಿ ನೀಡಲಾಯಿತು. ಪ್ರತಿ ಪಂಚವಾರ್ಷಿಕ ಯೋಜನೆಗಳಲ್ಲಿಯೂ ಅರಣ್ಯಾಭಿವೃದ್ಧಿಗೆ ಸಂಬಂಧಿಸಿದಂತೆ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಲಾಗಿತ್ತು. ಸ್ವತಂತ್ರ ಭಾರತದ ಮೊದಲ ಮೂರು ದಶಕಗಳಲ್ಲಿ ಅರಣ್ಯವನ್ನು ಆದಾಯದ ಮೂಲವನ್ನಾಗಿಯೇ ನೋಡಲಾಗಿತ್ತೆನ್ನುವುದು ವಿಪರ್ಯಾಸ. ನಂತರ ಅರಣ್ಯ ಉಳಿಸುವ, ಬೆಳೆಸುವ ಕಾರ್ಯಕ್ರಮಗಳಿಗೆ ಹೆಚ್ಚು ಹಣ ವಿನಿಯೋಗಿಸುವ ಪದ್ಧತಿ ಬೆಳೆದು ಬಂದಿದೆ. ಆದರೂ ಭಾರತದಲ್ಲಿ ಅರಣ್ಯ ಸಂಪತ್ತು, ಅರಣ್ಯ ಭೂಮಿ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಾ ಬಂದಿರುವುದಂತೂ ನಿಜ. ಅರಣ್ಯ ನಾಶ ಅಪಾಯಕಾರಿ ಬೆಳವಣಿಗೆ ಎಂಬ ವಾಸ್ತವವನ್ನು ಪರಿಸರತಜ್ಞರು, ಅರಣ್ಯ ವಿಜ್ಞಾನಿಗಳು ಸರ್ಕಾರದ ಗಮನಕ್ಕೆ ತಂದರು.

ಕೈಗಾರೀಕರಣದಿಂದಾಗಿ ಅರಣ್ಯಗಳ ಮೇಲೆ ಪರೋಕ್ಷ ಹಾನಿ ಎಗ್ಗಿಲ್ಲದೆ ನಡೆಯುತ್ತಿದೆ. ಪ್ರಸಕ್ತ ಇಂತಹ ಹಲವಾರು ರೀತಿಗಳಲ್ಲಿ ನಮ್ಮ ಗಿಡಮರಗಳು ಅಳಿವಿನ ಅಂಚಿನಲ್ಲಿವೆ. ಇದುವರೆಗೂ ಸುಮ್ಮನಿದ್ದು ಎಲ್ಲವನ್ನೂ ಸಹಿಸಿಕೊಂಡಿದ್ದ ಪರಿಸರವೂ ಮಾನವನ ದುರಾಸೆಗೆ ಅತೀವೃಷ್ಟಿ, ಅನಾವೃಷ್ಟಿಯಂತಹ ಕ್ರಿಯೆಗಳ ಮೂಲಕ ತನ್ನ ಸೇಡನ್ನು ತೀರಿಸಿಕೊಳ್ಳಲು ಪ್ರಾರಂಭಿಸಿದೆ. ಅದಕ್ಕೆ ಉದಾಹರಣೆಗಳೇ ಜಾಗತಿಕ ತಾಪಮಾನದಲ್ಲಿನ ಏರುಪೇರು, ಕಡಿಮೆಯಾಗುತ್ತಿರುವ ಮಳೆಯ ಪ್ರಮಾಣ, ಅತಿಯಾದ ಪರಿಸರ ಮಾಲಿನ್ಯ, ಅಶುದ್ಧವಾಗುತ್ತಿರುವ ಜಲ, ನೆಲ ಹಾಗೂ ಆಹಾರ ಪದಾರ್ಥಗಳು ಇಂದು ಇಡೀ ವಿಶ್ವವನ್ನೇ ಚಿಂತೆಗೀಡುಮಾಡಿವೆ. ತನ್ನ ಸಮಾಧಿಯನ್ನು ಮಾನವ ತನ್ನ ಕೈಯ್ಯಾರೆ ತಾನೇ ತೋಡಿಕೊಳ್ಳುತ್ತಿದ್ದಾನೋ ಎನ್ನುವ ಭಾಸವಾಗುತ್ತಿದೆ. ಪ್ರಕೃತಿಯ ಮತ್ತು ಮಾನವನ ಈ ಘೋರ ಕಾಳಗದಲ್ಲಿ ವಿನಾಶವಾಗುವುದು ಮಾನವನೇ ಹೊರತು ಪ್ರಕೃತಿಯಲ್ಲ. ಅದರ ಮುನ್ಸೂಚನೆಗಳೇ ಈಗ ಎಲ್ಲೆಡೆ ಕಂಡುಬರುತ್ತಿರುವ ಪ್ರವಾಹ, ಕಾಡ್ಗಿಚ್ಚು, ಭೂಕಂಪ, ಹಿಮಪಾತದಂತಹ ನೈಸರ್ಗಿಕ ವಿಕೋಪಗಳು. ಇದೆಲ್ಲದರ ಪರಿಣಾಮಗಳು ಭೀಕರವಾಗತೊಡಗಿದ್ದು ಪ್ರಕೃತಿಯ ಮುನಿಸಿನಿಂದ ನಮ್ಮನ್ನು ಕಾಪಾಡಿಕೊಳ್ಳಬೇಕೆಂದರೆ ನೈಸರ್ಗಿಕ ಸಂಪನ್ಮೂಲಗಳನ್ನು ದುರ್ಬಳಕೆ ಮಾಡದೇ ಸದ್ಬಳಕೆ ಮಾಡಿಕೊಂಡು ಪರಿಸರ ಮಾಲಿನ್ಯದಂತಹ ಅಪಾಯದಿಂದ ಪ್ರಕೃತಿಮಾತೆಯನ್ನು ಸಂರಕ್ಷಿಸಬೇಕಿದೆ.

## ಅರಣ್ಯ ರಕ್ಷಣೆಗೆ ಕ್ರಮಗಳು:

ಈ ನೆಲದ ಶ್ವಾಸಕೋಶವೇ ಆಗಿರುವ ಅರಣ್ಯ ಸಂಪತ್ತಿನ ರಕ್ಷಣೆಗೆ ನಾವೆಲ್ಲ ಟೊಂಕಕಟ್ಟಿ ನಿಲ್ಲುವ ಅಗತ್ಯ ಇದೆ. ಇದಕ್ಕೆ ಅರಣ್ಯ ಕುರಿತ ಜನಜಾಗೃತಿ ಅತಿ ಮುಖ್ಯ. ಇತ್ತೀಚಿನ ವರ್ಷಗಳಲ್ಲಿ ಅರಣ್ಯ ಪ್ರದೇಶವನ್ನು ಹೆಚ್ಚಿಸಲು ಸರ್ಕಾರಗಳು ಕ್ರಮ ಕೈಗೊಳ್ಳುತ್ತಿವೆ. ಭೂಮಿಯ ಫಲವತ್ತತೆಯನ್ನು ಹೆಚ್ಚಿಸುವುದಕ್ಕೆ ಆದ್ಯತೆ ನೀಡುತ್ತಿವೆ. ಅರಣ್ಯ ಪ್ರದೇಶವನ್ನು ವಿಸ್ತರಿಸುವುದೆಂದರೆ ಜೀವಿ ಪರಿಸರವನ್ನು ಸಮೃದ್ಧವಾಗಿಸಿದಂತೆ. ಕಾಡಿಲ್ಲದ ಕಡೆ ಕಾಡು ಬೆಳೆಸುವ ಪ್ರಯತ್ನಗಳು ಈಚೆಗಷ್ಟೇ ಆರಂಭವಾಗಿವೆ.

ಅರಣ್ಯ ಸಂಪತ್ತಿನ ರಕ್ಷಣೆಯಲ್ಲಿ ಜನರನ್ನು ತೊಡಗಿಸಿಕೊಳ್ಳುವುದು ಬಹುಮುಖ್ಯ. ಇಲಾಖೆಯ ಸಿಬ್ಬಂದಿ ಅರಣ್ಯದಲ್ಲಿನ ಹಾಗೂ ಕಾಡಂಚಿನ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಅದರಲ್ಲಿಯೂ ಅರಣ್ಯ ಪ್ರದೇಶಗಳ ಅಕ್ಕಪಕ್ಕದ ರೈತರನ್ನು ಸಂಪರ್ಕಿಸಿ ಅವರಿಗೆ ನೆರವಾಗುವಂಥ ಇತರ ಕಾರ್ಯಕ್ರಮಗಳನ್ನು ರೂಪಿಸುವುದು ಈ ನಿಟ್ಟಿನಲ್ಲಿ ಹೆಚ್ಚು ಪ್ರಯೋಜನಕಾರಿ.

1927ರಲ್ಲಿ ಎಲ್ಲಾ ಕಾನೂನುಗಳನ್ನು ಒಗ್ಗೂಡಿಸಿ "ಭಾರತೀಯ ಅರಣ್ಯ ಕಾಯ್ದೆ" ಯನ್ನು ಜಾರಿಗೆ ತಂದರು. ಭಾರತದ ಇತಿಹಾಸದಲ್ಲಿ ಆ ಕಾನೂನು ಒಂದು ಮೈಲಿಗಲ್ಲು. ಅರಣ್ಯ ಉತ್ಪಾದನೆಗಳನ್ನು ಹೊರ ಸಾಗಿಸುವುದು, ಮರದ ದಿಮ್ಮಿಗಳ ಮೇಲೆ ತೆರಿಗೆ, ಅರಣ್ಯ ನಾಶಕ್ಕೆ ಸಂಬಂಧಿಸಿದ ಆರೋಪಿಗಳಿಗೆ ಕಠಿಣ ಶಿಕ್ಷೆ ಇತ್ಯಾದಿ ನೂರಾರು ಅಂಶಗಳು ಆ ಕಾಯ್ದೆಯಲ್ಲಿದ್ದವು. ಆ ಕಾಯ್ದೆಯ ಅನ್ವಯ ಯಾವುದೇ ಅರಣ್ಯಾಧಿಕಾರಿ ಅಥವಾ ಪೊಲೀಸ್ ಅಧಿಕಾರಿ ಅರಣ್ಯಕ್ಕೆ ನಷ್ಟವಾಗುವಂತಹ ಸಣ್ಣಪುಟ್ಟ ಅಪರಾಧಗಳನ್ನೂ ಗಂಭೀರವಾಗಿ ಪರಿಗಣಿಸಬಹುದಿತ್ತು. ಆ ನಿಟ್ಟಿನಲ್ಲಿ ಅನುಮಾನಾಸ್ಪದ ಎಂದೆನಿಸಿದವರನ್ನು ಬಂಧಿಸಬಹುದಿತ್ತು.

ಕರ್ನಾಟಕದಲ್ಲಿ 1864 ರಷ್ಟು ಹಿಂದೆಯೇ ಅರಣ್ಯ ಇಲಾಖೆ ಹುಟ್ಟು ಪಡೆಯಿತು. ಕರ್ನಾಟಕವೂ ಸೇರಿದಂತೆ ಭಾರತದಾದ್ಯಂತ ಅರಣ್ಯ ಇಲಾಖೆಯು ಸರ್ಕಾರದ ಬೊಕ್ಕಸಕ್ಕೆ ಬಹುಮುಖ್ಯ ಆದಾಯದ ಮೂಲವಾಗಿತ್ತು. ಬ್ರಿಟಿಷರು ರೂಪಿಸಿದ 'ಅರಣ್ಯ ಕಾಯ್ದೆ–1927'ರ ಅಡಿಪಾಯದ ಮೇಲೆಯೇ ಸ್ವಾತಂತ್ರ್ಯನಂತರ ಅರಣ್ಯ ಸಂರಕ್ಷಣಾ ಯೋಜನೆಗಳನ್ನು ರೂಪಿಸಲಾಯಿತು. 1952ರಲ್ಲಿ ಭಾರತದಲ್ಲಿ ಅರಣ್ಯ ಕಾಯ್ದೆಯನ್ನು ತರಲಾಯಿತು. ಈ ಕಾಯಿದೆಯಲ್ಲಿನ ತಪ್ಪುಗಳನ್ನು ಸರಿಪಡಿಸಿ 1980ರಲ್ಲಿ ನೂತನ ಅರಣ್ಯ ಸಂರಕ್ಷಣಾ ಕಾಯ್ದೆಗೆ ಜೀವ ನೀಡಲಾಯಿತು. ಇದರ ಪ್ರಕಾರ ಮೀಸಲು ಅರಣ್ಯದ ಒತ್ತುವರಿ ಅಥವಾ ದುರ್ಬಳಕೆ, ಸರ್ಕಾರದ ಅನುಮತಿ ಇಲ್ಲದೆ ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಗಳಿಗೆ ಬಳಸುವುದು ಇತ್ಯಾದಿ ಚಟುವಟಿಕೆಗಳನ್ನು ಘೋರ ಅಪರಾಧಗಳೆಂದೇ ಪರಿಗಣಿಸುವಂತಾಯಿತು. ನೈಸರ್ಗಿಕ ಅರಣ್ಯವನ್ನು ಅಭಿವೃದ್ಧಿಪಡಿಸುವುದು ಎಂದರೆ ಅಲ್ಲಿ ಯಾವುದೇ ಮಾನವ ಚಟುವಟಿಕೆ ಇಲ್ಲದಂತೆ ನಿರ್ಬಂಧಿಸುವುದು.

ಶತಮಾನಗಳ ಹಿಂದೆಯೇ ಕರ್ನಾಟಕದಲ್ಲಿ ಅರಣ್ಯ ಸಂರಕ್ಷಣೆಯ ಪರಿಜ್ಞಾನವಿದ್ದರೂ, ಇವತ್ತು ರಾಜ್ಯದಲ್ಲಿ ಕೇವಲ ಶೇಕಡ 22ರಷ್ಟು ಅರಣ್ಯವಿದೆ. ಇದರಲ್ಲಿ ಕೇವಲ ಶೇಕಡ 40ರಷ್ಟು ದಟ್ಟ ಅಡವಿ ಇದೆ. ನಮ್ಮ ರಾಜ್ಯದಲ್ಲಿ ಸುಮಾರು 30ಸಾವಿರ ಚ.ಕಿ.ಮೀ ಮೀಸಲು ಅರಣ್ಯವಿದೆ. ಆದರೆ ದಿನೇ ದಿನೇ ಅರಣ್ಯದ ಒಟ್ಟು ವಿಸ್ತಾರದಲ್ಲಿ ಕಡಿಮೆಯಾಗುತ್ತಾ ನಡೆದಿರುವುದು ಆತಂಕಕಾರಿ ಸಂಗತಿಯಾಗಿದೆ.

ಭಾರತದಲ್ಲಿ, ಮರ ಗಿಡಗಳ ರಕ್ಷಣೆಗೆ ಬಹಳಷ್ಟು ಹಿಂದೆಯೇ ಹೋರಾಟಗಳು ನಡೆದಿದ್ದವು. ಎಪ್ಪತ್ತರ ದಶಕದ ಆರಂಭದಲ್ಲಿ ಹಿಮಾಲಯದ ಗಡವಾಲ್ ಪ್ರದೇಶದಲ್ಲಿ ಚಿಪ್ಕೊ ಚಳವಳಿ ಜನಾಂದೋಲನವಾಗಿ ಆಡಳಿತಗಾರರು ಮತ್ತು ಮರಗಳ್ಳರು ತತ್ತರಿಸುವಂತೆ ಮಾಡಿತ್ತು. ಅರಣ್ಯ ಸಂಪತ್ತನ್ನು ಉಳಿಸಿಕೊಳ್ಳುವುದಕ್ಕಾಗಿ ಜನಾಂದೋಲನದ ಅಗತ್ಯವಿದೆ. ಕೃಷಿಭೂಮಿಯನ್ನು ಉಳಿಸಿಕೊಳ್ಳಲು ಜನ ಪ್ರತಿಭಟನೆ ನಡೆಸಿದಂತೆ ಒಂದಿನಿತು ಕಾಡಿಗೆ ಕೊಡಲಿಪೆಟ್ಟು ಬಿದ್ದರೂ ಆ ಪ್ರದೇಶದಾದ್ಯಂತ ಜನ ಪ್ರತಿಭಟಿಸಿ ಸರ್ಕಾರದ ಗಮನಕ್ಕೆ ತರಬೇಕಾದ ಅಗತ್ಯ ಬಹಳಷ್ಟಿದೆ. ಜತೆಗೆ ಗ್ರಾಮೀಣ ಪ್ರದೇಶದಲ್ಲಿ ಪರಿಸರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕಿದೆ.

### ಅರಣ್ಯದಿಂದಾಗುವ ಪ್ರಯೋಜನಗಳು:

ದುಡ್ಡಿನಿಂದ ಚಿನ್ನ, ಬೆಳ್ಳಿ ಖರೀದಿಸಬಹುದು ಆದರೆ ಉತ್ತಮ ಆರೋಗ್ಯ, ಒಳ್ಳೆಯ ಗಾಳಿ, ನೀರು, ಆಹಾರ ಸಿಕ್ಕೀತೇ? 'ಕಾಡು ಇದ್ದರೆ ನಾಡು' ಎಂಬ ಮಾತು ಇಂದು ಎಲ್ಲೆಡೆ ಎಲ್ಲರಿಗೂ ತಿಳಿದಿರುವ ಅಂಶ. ಈ ತಿಳುವಳಿಕೆ ಜನಮಾನಸದಲ್ಲಿ ವೈಜ್ಞಾನಿಕ ಸ್ವರೂಪದಲ್ಲಿ ಬೇರೂರಬೇಕಿದೆ. ಇಲ್ಲದಿದ್ದರೆ ಮುಂದೊಂದು ದಿನ ಪ್ರತಿಯೊಬ್ಬ ಮಾನವನು ಬೆನ್ನಿಗೆ ಆಮ್ಲಜನಕದ ಸಿಲಿಂಡರ್ ಕಟ್ಟಿಕೊಂಡು ಹೊರಗೆ ನಡೆದಾಡಬೇಕಾದಂತಹ ಪರಿಸ್ಥಿತಿ ನಿರ್ಮಾಣವಾದರೂ ಆಶ್ಚರ್ಯಪಡಬೇಕಾಗಿಲ್ಲ.

ನಮ್ಮ ದೇಶದ ಅರಣ್ಯಗಳು ಜೀವ ವೈವಿಧ್ಯದ ಗಣಿಗಳು. ಔಷಧೀಯ ಸಸ್ಯಗಳ ಭಂಡಾರ. ಆದರೆ ಕಿರು ಅರಣ್ಯ ಉತ್ಪತ್ತಿಗಳ ಹೆಸರಿನಲ್ಲಿ ಅಮೂಲ್ಯ ಔಷಧೀ ಸಂಪತ್ತು ಸೂರೆಯಾಗುತ್ತಿರುವ ಸಂಗತಿ ಗಾಬರಿ ಮೂಡಿಸುವಷ್ಟು ಗಂಭೀರವಾದದ್ದು. ಪಶ್ಚಿಮ ಘಟ್ಟದ ಅರಣ್ಯ ವಾಸ್ತವವಾಗಿ ಅಪರೂಪದ ಸಸ್ಯಗಳ ಆಗರ. ಅಲ್ಲಿನ ಜೀವಿವೈವಿಧ್ಯ ವಿಶ್ವಪರಂಪರೆಯ ಪಟ್ಟಿಯಲ್ಲಿ ಸೇರುವಷ್ಟು ಅಪರೂಪದ್ದಾಗಿದೆ. ಪಶ್ಚಿಮಘಟ್ಟದಲ್ಲಿ ಸಿಗುತ್ತಿರುವ ಗಿಡಮೂಲಿಕೆಗಳಿಗೆ ಆಶ್ಚರ್ಯಕರ ಔಷಧ ಗುಣಗಳಿದ್ದು ಅವನ್ನು ವ್ಯವಸ್ಥಿತವಾಗಿ ಸಂರಕ್ಷಿಸಬೇಕಾಗಿದೆ.

ಅಪರಿಮಿತ ಜನಸಂಖ್ಯೆ ಇರುವ ನಮ್ಮ ದೇಶದಲ್ಲಿ ದಟ್ಟಾರಣ್ಯದಲ್ಲಿ ಕೂಡ ವಾಸಮಾಡುವ ಬುಡಕಟ್ಟು ಜನಾಂಗಗಳಿವೆ. ಅರಣ್ಯದ ಕಿರು ಉತ್ಪನ್ನಗಳನ್ನಷ್ಟೇ ಅವಲಂಬಿಸಿ ಜೀವನ ನಡೆಸುತ್ತಿದ್ದಾರೆ ಈ ಮೂಲ ನಿವಾಸಿಗಳು. ಕಾಡಿನಲ್ಲಿ ಅನಾದಿಕಾಲದಿಂದ ನೆಲೆಸಿದ್ದು ಈಗ ಕಾಡು ನಾಶವಾದಂತೆ ನಾಗರಿಕ ಸಂಪರ್ಕಕ್ಕೆ ಬರುತ್ತಿರುವ ಬುಡಕಟ್ಟು ಸಮುದಾಯಗಳಿವೆ. ಅವರನ್ನೆಲ್ಲ ಕಾಡಿನ ಹೊರಕ್ಕೆ ತಂದು ನೆಲೆಗೊಳಿಸುವ ಕೆಲಸ ಸುಲಭವಾದದ್ದಲ್ಲ. ದಟ್ಟ ಕಾಡಿನಲ್ಲಿ ತಮ್ಮದೇ ಶೈಲಿಗಳಲ್ಲಿ ವ್ಯವಸ್ಥಿತ ಕೃಷಿಯನ್ನು ಆಧರಿಸದೆ, ಗೆಡ್ಡೆ ಗೆಣಸು ಮೊದಲಾದ ಅರಣ್ಯದ ಉತ್ಪನ್ನಗಳನ್ನಷ್ಟೇ ಅವಲಂಬಿಸಿದ ಈ ಮೂಲನಿವಾಸಿ ಸಮುದಾಯಕ್ಕೆ ಕಾಡಿನಿಂದ ಹೊರಗೆ ಬಂದರೆ ನೀರಿನಿಂದ ಹೊರಹಾಕಿದ ಮೀನಿನಂತೆ ಚಡಪಡಿಸುವ ಪರಿಸ್ಥಿತಿ ಆಗದೇ ಇರದು.

ಮಲೆನಾಡು ಮತ್ತು ಅರೆಮಲೆನಾಡಿನ ಪ್ರದೇಶಗಳಲ್ಲಿ ಜನರ ನಿತ್ಯದ ಉರುವಲು ಬೇಡಿಕೆ, ಮನೆ ಕಟ್ಟಲು ಬೇಕಾದ ನಾಟಾ, ಸಾವಯವ ಕೃಷಿಗೆ ಅವಶ್ಯಕವಾದ ಸೊಪ್ಪು ಮೊದಲಾದವುಗಳನ್ನು ಒದಗಿಸುವಂಥ ಬಹೂಪಯೋಗಿ ಸಸ್ಯಗಳನ್ನು ಅಭಿವೃದಿಪಡಿಸುವ ಅಗತ್ಯವನ್ನು ಅರಣ್ಯ ಇಲಾಖೆ ಮನಗಾಣಬೇಕು. ನೈಸರ್ಗಿಕ ಅರಣ್ಯವೆಂದರೆ ಬಗೆಬಗೆಯ ಸಸ್ಯ ಸಂಕುಲಗಳ ವೈವಿಧ್ಯ. ಹೂವು, ಕಾಯಿ, ಹಣ್ಣು, ಬೀಜಗಳನ್ನು ಹೊತ್ತು ನಿಸರ್ಗವನ್ನು ಫಲವತ್ತಾಗಿಸುವ ಸಸ್ಯಗಳನ್ನು ಬೆಳೆಸುವುದರತ್ತ ಗಮನ ಹರಿಸುವುದು ಈಗಿನ ಅವಶ್ಯಕತೆಯಾಗಿದೆ.

ದೇಶದಲ್ಲಿ ನೈಸರ್ಗಿಕ ಸಮತೋಲನ ಕಾಪಾಡುವುದರಿಂದ ಜನರ ಆರೋಗ್ಯ ಪೂರ್ಣ ಬದುಕನ್ನು ಕಾಣಲು ಸಾಧ್ಯ. ಅಂತರ್ಜಲ ಅಭಿವೃದ್ಧಿಗಾಗಿ ಅರಣ್ಯೀಕರಣವನ್ನು ಕಡ್ಡಾಯಗೊಳಿಸುವುದು, ರಾಸಾಯನಿಕ ಸಿಂಪರಣೆ ತಡೆದು ಜೈವಿಕ ವ್ಯವಸಾಯ ಕ್ರಮದತ್ತ ಒಲವು ಬೆಳೆಸಬೇಕಿದೆ. ಜೈವಿಕ ಅಪಾಯಕಾರಿಯಾದ ಯೋಜನೆಗಳಿಗೆ ಶಾಶ್ವತ ಕೊನೆ ಹಾಡಬೇಕಿದೆ. ಜೀವವೈವಿಧ್ಯ ಸಂರಕ್ಷಣೆ ಮಾಡುವುದು, ಪರಿಸರ ಸಂಬಂಧಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಆಗಬೇಕಿದೆ.

ಜಗತ್ತಿನಾದ್ಯಂತ ಅರಣ್ಯ ಉತ್ಪಾದನೆಗಳ ಬಳಕೆಯ ಪ್ರಮಾಣ ಅತಿ ಹೆಚ್ಚಿನ ಮಟ್ಟದಲ್ಲಿದ್ದು, ಕಾಗದ, ಟರ್ಪಂಟೈನ್ ಸೇರಿದಂತೆ ಸುಮಾರು ಐದು ಸಾವಿರಕ್ಕೂ ಅಧಿಕ ಉಪವಸ್ತುಗಳ ಉತ್ಪಾದನೆಗೆ ಅರಣ್ಯ ಉತ್ಪನ್ನಗಳನ್ನು ಬಳಸಲಾಗುತ್ತಿದೆ. ಇದಲ್ಲದೆ ಕೈಗಾರಿಕೀಕರಣಕ್ಕೆ ಅರಣ್ಯವನ್ನು ಇತಿಮಿತಿಯಿಲ್ಲದೆ ಬಳಸಲಾಗುತ್ತಿದೆ.

**ಅರಣ್ಯ ಸಂರಕ್ಷಣೆಗಾಗಿ ಧೃಢ ಸಂಕಲ್ಪ ಮಾಡುವ:** ಹೊಸದಾಗಿ ಮರಗಿಡಗಳನ್ನು ನೆಟ್ಟು ಬೆಳಸಿ, ನಾಡಿಗಾಗಿ ಕಾಡನ್ನು ಕಡಿಯುವುದನ್ನು ನಿಲ್ಲಿಸಿ ಆ ಮೂಲಕ ಅರಣ್ಯಕ್ರಾಂತಿಯನ್ನುಂಟುಮಾಡುವ ಅಗತ್ಯವನ್ನು ನಮ್ಮ ಸಮುದಾಯಕ್ಕೆ, ಯುವ ಪೀಳಿಗೆಗೆ ಮತ್ತು ಮಕ್ಕಳಿಗೆ ತಿಳಿಸೋಣ. ಶಾಲಾ ಆವರಣದಲ್ಲಿ ಹೆಚ್ಚು ಗಿಡಮರಗಳನ್ನು ಬೆಳೆಸುವುದನ್ನು ರೂಢಿಸಿ, ಪ್ರತಿ ಮಗುವಿಗೂ ಒಂದೊಂದು ಗಿಡ ನೀಡಿ ಅದನ್ನು ಪೋಷಿಸುವ ಜವಾಬ್ದಾರಿ ವಹಿಸಿ, ಮೇಲ್ವಿಚಾರಣೆ ನಡೆಸೋಣ. ಸಾಲುಮರದ ತಿಮ್ಮಕ್ಕನಂಥವರು ನಮಗೆ ಮತ್ತು ನಮ್ಮ ಯುವಪೀಳಿಗೆಗೆ ಆದರ್ಶವ್ಯಕ್ತಿಗಳಾಗಲಿ. ಜನರನ್ನು ದೂರ ಇಟ್ಟು ಆರಂಭಿಸುವ ಅರಣ್ಯ

ಅಭಿವೃದ್ಧಿಯ ಯೋಜನೆಗಳು ಯಶಸ್ಸನ್ನು ಕಾಣುವುದು ವಿರಳ. ಆದ್ದರಿಂದ ಅರಣ್ಯ ಅಬಿವೃದ್ಧಿಯ ಯಾವುದೇ ಕಾರ್ಯಕ್ರಮ ಹಮ್ಮಿ ಕೊಂಡರೂ ಅದರಲ್ಲಿ ಸ್ಥಳೀಯರ ಸಹ ಭಾಗಿತ್ವವನ್ನು ಮರೆಯಬಾರದು.

ವಿಶ್ವಪರಿಸರ ದಿನವೆಂದರೆ ಎಂದಿನಂತೆ ಗಿಡ ನೆಡುವುದು, ಪರಿಸರ ಉಳಿಸುವ ಕುರಿತು ಎರಡು ಮಾತನಾಡುವುದು ಮಾತ್ರವೇ ಆಗಬಾರದು. ಈ ನಿಟ್ಟಿನಲ್ಲಿ ಪ್ರೀತಿ, ಶ್ರದ್ದೆ ಮತ್ತು ನಿಷ್ಠೆಯಿಂದ ಅರಣ್ಯ ಸಂರಕ್ಷಣೆಗೆ ನಾವು ಪಣತೊಡುವ ಅಗತ್ಯವಿದೆ. ನಮ್ಮ ಈ ಪ್ರಾಮಾಣಿಕ ಪ್ರಯತ್ನ ಮುಂದಿನ ಪೀಳಿಗೆಗೆ ಸಹಕರಿಸಲಿ.ಸಹಸ್ರಾರು ವರ್ಷಗಳಿಂದ ಪ್ರಕೃತಿಯು ನಮ್ಮ ಹಿತ ಕಾಪಾಡುತ್ತಿರುವಂತೆ ನಮ್ಮಿಂದಲೂ ಅದು ಪ್ರಾಮಾಣಿಕ ಬದ್ಧತೆಯನ್ನು ಬೇಡುತ್ತಿದೆ. ಅದರ ಬೇಡಿಕೆಯನ್ನು ಪೂರೈಸುವ ಜವಾಬ್ದಾರಿ ಪ್ರಕೃತಿಯನ್ನು ಅವಲಂಬಿಸಿರುವ ನಮ್ಮೆಲ್ಲರ ಹೊಣೆಗಾರಿಕೆಯಾಗಲಿ. "ಊರೆಲ್ಲ ಕೊಳ್ಳೆ ಹೋದಮೇಲೆ ದಿಡ್ಡಿ ಬಾಗಿಲು ಹಾಕಿದರಂತೆ", ಹೀಗಾಗದೆ ಸೃಷ್ಟಿಯ ಕಿರೀಟ ಎನಿಸಿಕೊಂಡ ಮನುಷ್ಯ ದೇವರ ಸೃಷ್ಟಿಯ ಭಾಗವಾದ ಪರಿಸರ(ಅರಣ್ಯ)ವನ್ನು ರಕ್ಷಿಸುವ ಹೊಣೆ ಹೊರಬೇಕು.

**ಪರಿಸರ ಸ್ನೇಹಿಯಾಗಿರಲು ಸಿದ್ಧರಾಗೋಣ :** ನಮ್ಮ ಜೀವನ ಶೈಲಿಯಿಂದಾಗಿಯೇ ಇಂದು ಸಾಕಷ್ಟು ಪರಿಸರ ನಾಶವು ಸಂಭವಿಸುತ್ತಿದ್ದು ನಾವು ಬಳಸಬಹುದಾದ ರಾಸಾಯನಿಕ ಉತ್ಪನ್ನಗಳು, ಎಸೆಯುವ ತ್ಯಾಜ್ಯ, ವಾಹನದಿಂದ ಹೊರಹಾಕುವ ವಿಷಾನಿಲ ಮುಂತಾದವುಗಳ ಕಡೆ ಗಮನ ನೀಡಿ ಅನಗತ್ಯ ಹಾಗೂ ಪರಿಸರಕ್ಕೆ ಹಾನಿಮಾಡುವಂಥ ವಸ್ತುಗಳ ಬಳಕೆಯನ್ನು ಮಿತಗೊಳಿಸಿ ಪರಿಸರ ಸ್ನೇಹಿಯಾಗಿ ಬದುಕುವ ವಿಧಾನವನ್ನು ತಿಳಿಸಿಕೊಡೋಣ.

## ಹವಾಮಾನ ಬದಲಾವಣೆ ಮತ್ತು ಜಾಗತಿಕ ತಾಪಮಾನ ಏರಿಕೆ

ಅಭಿವೃದ್ಧಿಯ ನೆಪದಲ್ಲಿ ವಿಶ್ವದೆಲ್ಲೆಡೆ ಪರಿಸರದ ಮೇಲಾಗುತ್ತಿರುವ ಅತಿಕ್ರಮಣದಿಂದಾಗಿ ಕಣ್ಣಿಗೆ ಕಾಣುವಂತೆ ಬಹುತೇಕ ಬದಲಾವಣೆಗಳನ್ನು ಕಾಣುತ್ತಿದ್ದೇವೆ. ಋತುಮಾನಗಳಲ್ಲಿ ತೀವ್ರಗತಿಯ ವ್ಯತ್ಯಾಸಗಳು, ಉಷ್ಣಾಂಶದಲ್ಲಿ ಏರಿಕೆ, ಮಳೆಯ ಪ್ರಮಾಣದಲ್ಲಿ ಏರಿಳಿತ (ಅತಿವೃಷ್ಟಿ – ಅನಾವೃಷ್ಟಿ).

### ಹವಾಮಾನ ಬದಲಾವಣೆ ಎಂದರೇನು ಮತ್ತು ಅದರಿಂದಾಗುವ ಪರಿಣಾಮಗಳು:

ಹವಾಮಾನ ಬದಲಾವಣೆ ಎಂದರೆ ಅತಿರೇಕವಾದ ಹವಾಮಾನ ಲಕ್ಷಣಗಳು ಉದಾ: ಬಿಸಿಗಾಳಿ, ಪ್ರವಾಹಗಳು,ಬಿರುಗಾಳಿ, ಬರಪರಿಸ್ಥಿತಿ ಮತ್ತು ಕಾಡ್ಗಿಚ್ಚು ನಂತಹ ಪರಿಸ್ಥಿತಿಗಳು ಆಗಿಂದಾಗ್ಗೆ ಉದ್ಭವಿಸುತ್ತಿರುವುದು. ಇದರ ಪರಿಣಾಮ ಭೂಮಿ ಮೇಲೆ ಜೀವಿಸುತ್ತಿರುವ ಪ್ರಾಣಿಸಂಕುಲದ ಮೇಲೆ ಹಾಗೂ ಮನುಷ್ಯ ಅವಲಂಬಿಸಿರುವ ಕೃಷಿಯ ಮೇಲೆ ವ್ಯತಿರಿಕ್ತ ಪರಿಣಾಮಗಳು ಉಂಟಾಗುತ್ತಿವೆ. ಇದರ ಜೊತೆಗೆ ಸಸ್ಯ ಮತ್ತು ಪ್ರಾಣಿ ಪ್ರಬೇಧಗಳ ಅಳಿಯುವಿಕೆ ಮತ್ತು ಸಾಂಕ್ರಾಮಿಕ ರೋಗಗಳ ಹರಡುವಿಕೆ ಸಹ ತೀವ್ರಗೊಳ್ಳುತ್ತಿವೆ.

### ಹವಾಮಾನ ಬದಲಾವಣೆಗೆ ಕಾರಣಗಳೇನು?

ಹವಾಮಾನ ಬದಲಾವಣೆಗೆ ಪ್ರಮುಖ ಕಾರಣ ಏರುಪೇರಾಗುತ್ತಿರುವ ವಾತಾವರಣದ ಉಷ್ಣಾಂಶ. ಇದಕ್ಕೆ ಮೂಲಕಾರಣ ಹಸಿರು ಮನೆ ಅನಿಲಗಳು ಇಂಗಾಲದ ಡೈ ಅಕ್ಸೈಡ್, ಮೀಥೇನ್, ನೈಟ್ರಸ್ ಅಕ್ಸೈಡ್, ಕ್ಲೋರೋಫ್ಲೂರೊ ಕಾರ್ಬನ್‌ಗಳು, ಹ್ಯಾಲೋ ಕಾರ್ಬನ್‌ಗಳು ಇತ್ಯಾದಿ. ಈ ಅನಿಲಗಳು ಸೂರ್ಯನಿಂದ ಭೂಮಿಗೆ ಬರುವ ಕಿರಣಗಳ ತಾಪಮಾನವನ್ನು ಹಿಡಿದಿಟ್ಟುಕೊಂಡು ಮತ್ತೆ ವಾತಾವರಣಕ್ಕೆ ಹೋಗಲು ಬಿಡದೆ ಭೂಮಿಯ ಮೇಲಿನ ಉಷ್ಣಾಂಶವನ್ನು ಅವಶ್ಯಕತೆಗಿಂತಲೂ ಹೆಚ್ಚಿಸುತ್ತಿವೆ. ಇದಕ್ಕೆ ಕಾರಣ ಮನುಷ್ಯ ಅಭಿವೃದ್ಧಿಯ ನೆಪದಲ್ಲಿ ಮಾಡುವ ಅತಿರೇಕಗಳು. ಉದಾ:

- ಕೈಗಾರಿಕಾ ಕ್ರಾಂತಿ,
- ವಾಯು, ಜಲ, ರಸ್ತೆ ಮತ್ತು ರೈಲು ಸಾಗಾಣಿಕೆ
- ಕೆಲವು ಕೃಷಿ ಪದ್ಧತಿಗಳು– ಭತ್ತದ ಕೃಷಿ
- ಪಶು ಸಂಗೋಪನೆ
- ಗೊಬ್ಬರಗಳ ಬಳಕೆ – ಸಾವಯವ ಗೊಬ್ಬರಗಳ ಕಳಿಯುವಿಕೆ
- ಇಂಧನಗಳ ಅತಿಯಾದ ಬಳಕೆ( ಇದ್ದಲು, ಪೆಟ್ರೋಲಿಯಂ ಉತ್ಪನ್ನಗಳು, ಗ್ಯಾಸ್).
- ಪ್ರಾಣಿ, ಸಸ್ಯ ಮತ್ತು ಆಹಾರ ತ್ಯಾಜ್ಯಗಳ ಕೊಳೆಯುವಿಕೆ, ಶೌಚ ನೀರು ಇತ್ಯಾದಿಗಳು

ಇದರೊಂದಿಗೆ ವಾತಾವರಣದಲ್ಲಿರುವ ತೇವಾಂಶವೂ ಸಹ ಒಂದು ರೀತಿಯ ಹಸಿರುಮನೆಯ ಅನಿಲವಾಗಿ ಪರಿಣಮಿಸುತ್ತಿದೆ. ಇದೆಲ್ಲದರ ಪರಿಣಾಮ ಬರುವ ಕೆಲವೇ ವರ್ಷಗಳಲ್ಲಿ ಇಡೀ ಜೀವ ಸಂಕುಲ ಸಂಕಷ್ಟಕ್ಕೆ ಎದುರಾಗುವ ಪರಿಸ್ಥಿತಿ ಉದ್ಭವವಾಗುತ್ತಿದೆ. ಇದಕ್ಕೆ ಮೂಲಕಾರಣ ಜಾಗತಿಕ ತಾಪಮಾನದಲ್ಲಿ ಆಗುತ್ತಿರುವ ಏರಿಕೆ. ಕಳೆದ ನೂರು ವರ್ಷಗಳಲ್ಲಿ ಒಂದು ಡಿಗ್ರಿ ಸೆಂಟಿ ಗ್ರೇಡ್ ಉಷ್ಣಾಂಶ ಏರಿರುವದರಿಂದ ಸಮುದ್ರ ಮಟ್ಟದಲ್ಲಿ 0.7 ಇಂಚಿನಷ್ಟು ಏರಿಕೆಯಾಗಿದೆ. ಇದಕ್ಕೆ ಕಾರಣ ಹಿಮಪರ್ವತಗಳ ಕರಗುವಿಕೆ, ಇದು ಹೀಗೆ ಮುಂದುವರಿದರೆ 2100 ಹೊತ್ತಿಗೆ ಸಮುದ್ರ ಮಟ್ಟದಲ್ಲಿ ಸುಮಾರು 50 ಸೆಂಟಿಮೀಟರಿನಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎಂದು ವಿಜ್ಞಾನಿಗಳ ಅಂದಾಜು. ಒಂದುವೇಳೆ ಹಿಗಾದರೆ ಸಮುದ್ರ ತಟದಲ್ಲಿರುವಂತಹ ಎಲ್ಲ ನೆಲೆಗಳು ಸಮುದ್ರದಲ್ಲಿ ಮುಳುಗಿ ಹೋಗುವ ಸಾಧ್ಯತೆ ಇದೆ. ಈಗಾಗಲೇ ಅತ್ಯಂತ ತಂಪು ಪ್ರದೇಶದ ಕೃಷಿ ಪದ್ಧತಿಗಳು ಮತ್ತಷ್ಟು ಎತ್ತರ ಪ್ರದೇಶಕ್ಕೆ ವರ್ಗಾಯಿಸಲ್ಪಡುತ್ತಿವೆ.

ಮುಂದುವರಿಯುವುದು . . . . . . .

## ಶುಚಿತ್ವ ಕ್ರಾಂತಿಗೆ ಮುನ್ನುಡಿ ಬರೆದ ರಾಗಿಮುದ್ದನಹಳ್ಳಿಯ ಚೈತನ್ಯ ಮಹಿಳಾ ಮಹಾಸಂಘ

ನಮ್ಮ ದೇಶ ಹಳ್ಳಿಗಳ ದೇಶ. ಹಳ್ಳಿಗಳ ಸ್ವಚ್ಚತೆ ಮಹಾತ್ಮ ಗಾಂಧೀಜಿಯವರ ಕನಸಾಗಿತ್ತು. ಆಗ ಮಾತ್ರ ಅಲ್ಲಿಯ ಜನರ ಬದುಕು ಆರೋಗ್ಯ ಪೂರ್ಣವಾಗಲು ಸಾಧ್ಯ. ಈ ನಿಟ್ಟಿನಲ್ಲಿ ಗ್ರಾಮ ನೈರ್ಮಲ್ಯ, ಸ್ವಚ್ಚತೆ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಬೇಕು. ಸಂಪೂರ್ಣ ನೈರ್ಮಲ್ಯ ಸಾಧಿಸಲು ಕೇಂದ್ರ ಮತ್ತು ರಾಜ್ಯ

ಸರ್ಕಾರಗಳು ಹಳ್ಳಿಗಳಿಗೆ ಹಲವಾರು ಯೋಜನೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಸಮಗ್ರ ಸ್ವಚ್ಛತೆಯನ್ನು ಕೇಂದ್ರೀಕೃತ ವಾಗಿರಿಸಿಕೊಂಡು, ಇಡಿ ಗ್ರಾಮದ ಸ್ವಚ್ಛತೆಗಾಗಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯನ್ನು ಪ್ರತಿ ಪಂಚಾಯತಿಗಳು ತಮ್ಮ ಹಂತದಲ್ಲಿಯೇ ಅನುಷ್ಠಾನ ಗೊಳಿಸಬೇಕು. ಈ ನಿಟ್ಟಿನಲ್ಲಿ ರಾಗಿಮುದ್ದನಹಳ್ಳಿಯ ಚೈತನ್ಯ ಮಹಿಳಾ ಮಹಾಸಂಘದ ಕೊಡುಗೆ ಪ್ರಶಂಸನೀಯ.

ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಗುಮ್ಮನಹಳ್ಳಿ ಗ್ರಾಮ ಪಂಚಾಯಿತಿಯ ರಾಗಿಮುದ್ದನ ಹಳ್ಳಿ ಗ್ರಾಮವು 664 ಕುಟುಂಬಗಳನ್ನು ಒಳಗೊಂಡಿದೆ. ಜ್ಯೋತಿರ್ ವಿಕಾಸ ಸಮಾಜ ಸೇವಾ ಸಂಸ್ಥೆಯ ಮಾರ್ಗದರ್ಶನದಲ್ಲಿ ರಾಗಿಮುದ್ದನಹಳ್ಳಿ ಗ್ರಾಮದಲ್ಲಿ ಒಟ್ಟು 19 ಮಹಿಳಾ ಸ್ವ-ಸಹಾಯ ಸಂಘಗಳನ್ನು ರಚಿಸಲಾಗಿದೆ. ಈ ಸಂಘಗಳು ರಾಗಿಮುದ್ದನಹಳ್ಳಿ ಗ್ರಾಮವನ್ನು ಸ್ವಚ್ಛಗ್ರಾಮ, ಸುರಕ್ಷಿತ ಆರೋಗ್ಯ ಪಾಲನೆ, ಶುದ್ಧ ಕುಡಿಯುವ ನೀರು, ಉತ್ತಮ ನೈರ್ಮಲ್ಯ ಮತ್ತು ಮೂಲಭೂತ ಅವಶ್ಯಕತೆಗಳನ್ನು ಪಡೆಯಲು ಹಕ್ಕು ಆಧಾರಿತವಾಗಿ ಶ್ರಮಿಸುತ್ತಿವೆ. ಈ ಉದ್ದೇಶದಿಂದ ಹಲವಾರು ಸಮುದಾಯ ಆಧಾರಿತ ಕಾರ್ಯಕ್ರಮಗಳನ್ನು ಇಲ್ಲಿಯವರೆಗೂ ವಿವಿಧ ಇಲಾಖೆ ಮತ್ತು ಸ್ಥಳೀಯ ಸರ್ಕಾರಗಳ ಸಹಕಾರದಿಂದ ನಡೆಸುತ್ತಾ ಬಂದಿದೆ.

ದಿನಾಂಕ 14.12.2014ರಂದು ಬದಲಾವಣೆಗೆ ಒಂದು ಅರ್ಥ ತರುವ ನಿಟ್ಟಿನಲ್ಲಿ ಜ್ಯೋತಿರ್ ವಿಕಾಸ ಸಮಾಜ ಸೇವಾ ಸಂಸ್ಥೆಯ ಸಿಬ್ಬಂದಿ ವರ್ಗದವರ ಸಲಹೆ ಹಾಗೂ ಮಾರ್ಗದರ್ಶನದಲ್ಲಿ 19 ಸಂಘಗಳನ್ನು ಒಟ್ಟುಗೂಡಿಸಿ ಗುಮ್ಮನಹಳ್ಳಿ ಗ್ರಾಮಪಂಚಾಯಿತಿ ಮಟ್ಟದಲ್ಲಿ 38 ಜನ ಸದಸ್ಯರನ್ನೊಳಗೊಂಡ **ಚೈತನ್ಯ ಮಹಿಳಾ ಮಹಾಸಂಘ**ವನ್ನು ರಚಿಸಲಾಯಿತು. ಈ ಮಹಾ ಸಂಘವು ತನ್ನದೇ ಆದ ಗುರಿ ಉದ್ದೇಶಗಳೊಂದಿಗೆ ನಿರ್ದಿಷ್ಟ ಕ್ರಿಯಾ ಯೋಜನೆಯನ್ನು ರೂಪಿಸಿ ಸಮುದಾಯಾಧಾರಿತ ಕಾರ್ಯಕ್ರಮಗಳನ್ನು ಆಯೋಜಿಸುತ್ತಿವೆ.

ಮಹಾಸಂಘದ ಸಾಮಾನ್ಯ ಸಭೆಯಲ್ಲಿ ಸಮುದಾಯದಲ್ಲಿರುವ ತಿಪ್ಪೆರಾಶಿಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಆಗುತ್ತಿರುವ ಬಗ್ಗೆ ಚರ್ಚಿಸಿ ತಿಪ್ಪೆ ವಿಲೇವಾರಿಗೆ ಕ್ರಮ ಕೈಗೊಳ್ಳಲು ನಿರ್ಣಯಿಸಿ, ಸಮುದಾಯದ ಜನರಲ್ಲಿ ಈ ಕುರಿತು ಜಾಗೃತಿ ಮೂಡಿಸಿ, ದಿನಾಂಕ 05.04.2016ರಂದು ಗ್ರಾಮಪಂಚಾಯಿತಿಗೆ ಅರ್ಜಿಯನ್ನು ಸಲ್ಲಿಸಲಾಯಿತು. ದಿನಾಂಕ 05.05.2016ರ ಒಳಗೆ ಗ್ರಾಮ ಪಂಚಾಯಿತಿಯಿಂದ ಗ್ರಾಮದ ಎಲ್ಲ ಮನೆಗಳಿಗೆ ತಿಪ್ಪೆಗಳನ್ನು ತೆರವುಗೊಳಿಸಬೇಕೆಂದು ನೋಟೀಸು ಕಳುಹಿಸಲಾಗಿದ್ದರೂ ಕೇವಲ 10 ಮನೆಗಳ ತಿಪ್ಪೆಗಳು ಮಾತ್ರ ವಿಲೇವಾರಿಯಾಗಿತ್ತು. ದಿನಾಂಕ 05.06.2016ರಂದು ಪುನಃ ಗ್ರಾಮ ಪಂಚಾಯಿತಿಗೆ ಮಹಾಸಂಘದ ಸದಸ್ಯರು ಭೇಟಿ ಮಾಡಿ ಸಮಸ್ಯೆಯ ಬಗ್ಗೆ ಅನುಸರಣೆಯನ್ನು ಮಾಡಿದುದರ ಪರಿಣಾಮವಾಗಿ ದಿನಾಂಕ 07.07.2016ರಂದು ಗ್ರಾಮ ಪಂಚಾಯಿತಿಯಿಂದ ಮಹಾಸಂಘದ ಸಹಕಾರ ಬೇಕೆಂದು ನೋಟೀಸು ಕಳುಹಿಸಲಾಗಿದ್ದು, ಮಹಾಸಂಘದ ಸದಸ್ಯರು ಗ್ರಾಮ ಪಂಚಾಯಿತಿ ಸದಸ್ಯರೊಂದಿಗೆ ಕೂಡಿ ಗ್ರಾಮದಲ್ಲಿರುವ ತಿಪ್ಪೇಗಳನ್ನು ತೆರವುಗೊಳಿಸುವಂತೆ ಮಾಡಿದರು. ತಿಪ್ಪೆಗಳನ್ನು ಪುನಃ ಹಾಕಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೆಂದು ತೀರ್ಮಾನಿಸಲಾಗಿದೆ.

ಸಮಸ್ಯೆಯನ್ನು ಕೈಗೆತ್ತಿಕೊಂಡು ಪರಿಹರಿಸಿದ ಚೈತನ್ಯ ಮಹಾಸಂಘ, ಮಾರ್ಗದರ್ಶನ ನೀಡಿದ ಜ್ಯೋತಿರ್‌ವಿಕಾಸ ಸಮಾಜ ಸೇವಾ ಸಂಸ್ಥೆ ಹಾಗೂ ಕ್ರಾಸ್ ಸಂಸ್ಥೆ, ಬೆಂಗಳೂರು ಇವರಿಗೆ ಗ್ರಾಮದ ಜನರು ಅಭಾರಿಯಾಗಿದ್ದಾರೆ.






## ನಿರ್ದೇಶಕ ಮಂಡಳಿಗೆ ಸ್ವಾಗತ



**ವಂ. ಸ್ವಾಮಿ. ರಿಚರ್ಡ್ ಪಾಯ್ಸ್**
ನಿರ್ದೇಶಕರು ಎಸ್ ಎಮ್ ಎಸ್ ಎಸ್ ಎಸ್,
ಚೈತನ್ಯ – ಸಾಗರ ರಸ್ತೆ,
ಗಾಡಿಕೊಪ್ಪ, ವಿನೋಭಾನಗರ ಅಂಚೆ,
ಶಿವಮೊಗ್ಗ – 577 204



**ವಂ. ಸ್ವಾಮಿ. ಅಂಬ್ರೋಸ್ ಫರ್ನಾಂಡಸ್**
ನಿರ್ದೇಶಕರು – ಕೆ.ಡಿ.ಡಿ.ಸಿ.
ಕಾರವಾರ, ಬಿಷಪ್ಸ್ ಓಲ್ಡ್ ಹೌಸ್ –
ಕಾರವಾರ – 581 302, ಉತ್ತರಕನ್ನಡ



**ವಂ. ಸ್ವಾಮಿ. ಜೋಸೆಫ್ ನವೀನ್‌ಕುಮಾರ್**
ನಿರ್ದೇಶಕರು – ಬಿ ಎಂ ಎಸ್ ಎಸ್ ಎಸ್,
ಪಿ.ಬಿ.ನಂ 4626, ನಂ.5, ನಂದಿದುರ್ಗ ರಸ್ತೆ
ಬೆಂಗಳೂರು – 560 046

 ಶ್ರೀ. ಕ್ಲೆಮೆಂಟ್ ಫೆರ್ನಾಂಡಿಸ್ ಮತ್ತು ಶ್ರೀ ರಿಚರ್ಡ್ ಮಾರ್ಟಿಸ್

## ಪಂಚಾಯತಿ ರಾಜ್ ಸಂಸ್ಥೆಗಳ ಸಶಕ್ತೀಕರಣ ಕಾರ್ಯಾಗಾರ – ಮೇ 10,2017




ಪಂಚಾಯತಿರಾಜ್ ಸಂಸ್ಥೆಗಳ ಬಲವರ್ಧನೆಗಾಗಿ ಒಂದು ದಿನದ ಕಾರ್ಯಗಾರವನ್ನು ಕ್ರಾಸ್ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಕರ್ನಾಟಕದ ವಿವಿಧ ಭಾಗಗಳಿಂದ ಸುಮಾರು 160 ಮಂದಿ ಪ್ರತಿನಿಧಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ವಂದನೀಯ ಸ್ವಾಮಿ ಪೌಸ್ತಿನ್ ಲೋಬೋ, ರಾಷ್ಟ್ರೀಯ ನಿರ್ದೇಶಕರು, ಪಾಂಟಿಫಿಕಲ್ ಮಿಷನ್ ಆರ್ಗನೈಸೇಷನ್, ಕಾರ್ಯಾಗಾರವನ್ನು ಉದ್ಘಾಟಿಸಿದರು. ತಮ್ಮ ಉದ್ಘಾಟನಾ ಭಾಷಣದಲ್ಲಿ, ಎಲ್ಲರೂ ಹುಟ್ಟಿನಿಂದಲೇ ನಾಯಕತ್ವ ಗುಣಗಳನ್ನು ಹೊಂದಿರುತ್ತಾರೆ, ಅವಕಾಶ ಸಿಕ್ಕಿದಾಗ ನಾಯಕತ್ವ ವಹಿಸುತ್ತಾರೆ ಎಂದು ವಿವರಿಸಿ ಪ್ರಸ್ತುತ ಸ್ಥಳೀಯ ಸರಕಾರಗಳಲ್ಲಿ ನಾಯಕತ್ವದ ಅಗತ್ಯದ ಬಗ್ಗೆ ಒತ್ತಿ ಹೇಳಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಾರುತಿ ನಾಯಕ್, ಶ್ರೀ ಸಾವೇರ್ ಫರ್ನಾಂಡಿಸ್ ಮತ್ತು ಶ್ರೀ ಜಿ. ಎಂ. ವರ್ಗಿಸ್‌ರವರು ಶಿಬಿರವನ್ನು ನಡೆಸಿಕೊಟ್ಟರು. ಸಂಪನ್ಮೂಲ ವ್ಯಕ್ತಿಗಳು ಅತೀ ಹಿಂದುಳಿದ ಮಹಿಳೆಯರಲ್ಲಿ ನಾಯಕತ್ವ ಪ್ರತಿಭೆಯನ್ನು ಗುರುತಿಸಿ ಮೌಲ್ಯಾಧಾರಿತ ನಾಯಕತ್ವ ಬೆಳೆಸಿ ಸ್ಥಳೀಯ ಆಡಳಿತದಲ್ಲಿ ಭಾಗೀದಾರರಾಗಲು ವಿವಿಧ ಪ್ರಕ್ರಿಯೆ ಮತ್ತು ವಿಧಾನಗಳ ಬಗ್ಗೆ ಪ್ರಶಿಕ್ಷಣಾರ್ಥಿಗಳಿಗೆ ಪ್ರಜ್ಞೆ ಮೂಡಿಸಿದರು. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ಫಾ. ಸೆಬಾಸ್ಟಿಯನ್ ಫರ್ನಾಂಡಿಸ್‌ರವರು ಕಾರ್ಯಾಗಾರದಲ್ಲಿ ಭಾಗವಹಿಸಿದ ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದರು.

## ಪಂಚಾಯತಿ ರಾಜ್ ಬಲವರ್ಧನೆ ಮತ್ತು ಉತ್ತಮ ಆಡಳಿತದ ಬಗ್ಗೆ ಕಾರ್ಯಾಗಾರ– ಮೇ 11–12,2017



ಕ್ರಾಸ್ ಸಂಸ್ಥೆ, ಬೆಂಗಳೂರು, ಇದರ ತರಬೇತಿ ಕೇಂದ್ರದಲ್ಲಿ ಪಂಚಾಯತಿ ರಾಜ್ ಬಲವರ್ಧನೆ ಮತ್ತು ಉತ್ತಮ ಆಡಳಿತದ ಬಗ್ಗೆ ಎರಡು ದಿನಗಳ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ಸ್ವಾಮಿ ಸೆಬಾಸ್ಟಿಯನ್ ಫರ್ನಾಂಡಿಸ್‌ರವರು ಪ್ರಸ್ತುತ ಸ್ಥಳೀಯ ಸರಕಾರಗಳ ಅಧಿಕಾರ, ಕಾರ್ಯಕ್ಷಮತೆ, ಜನಭಾಗವಹಿಸುವಿಕೆ, ಉತ್ತಮ ಆಡಳಿತದ ಅವಶ್ಯಕತೆ, ಮಾಹಿತಿ ಪಡೆಯುವ ಅವಕಾಶ, ಹಕ್ಕುಗಳ ಬಗ್ಗೆ ತಿಳುವಳಿಕೆ, ಸರಕಾರಿ ಕಛೇರಿಗಳಲ್ಲಿ ಲಭ್ಯವಿರಬೇಕಾದ ಮಾಹಿತಿಯ ತಿಳುವಳಿಕೆಯನ್ನು ಸಂಕ್ಷಿಪ್ತವಾಗಿ ವಿವರಿಸಲಾಯಿತು. ಉತ್ತಮ ಆಡಳಿತದ ಬಗ್ಗೆ ಕೆಲವು ಜ್ವಲಂತ ವಿವರಣೆಯ ಮೂಲಕ ಮಾಹಿತಿಯನ್ನು ನೀಡಿದರು. ಶ್ರೀ ಸಾವೇರ್ ಫರ್ನಾಂಡಿಸ್ ಮತ್ತು ಶ್ರೀ ಮಾರುತಿ ನಾಯಕ್ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಮಾಹಿತಿ ಹಕ್ಕು, ಸಕಾಲ, ನಾಗರಿಕ ಸನ್ನದ್ದು, ಬಳಕೆದಾರರ ರಕ್ಷಣಾ ಕಾಯಿದೆ, ಗ್ರಾಮ ಸಭೆ ಮತ್ತು ಸಾಮಾಜಿಕ ಲೆಕ್ಕ ಪರಿಶೋಧನೆ ಇವುಗಳ ಬಗ್ಗೆ ವಿವರಿಸಿದರು. ಇವು ಉತ್ತಮ ಆಡಳಿತದ ಕೆಲವು ಉಪಕರಣಗಳಾಗಿದ್ದು ಜನರು ಇದರ ಬಗ್ಗೆ ಹೆಚ್ಚಿನ ಮಾಹಿತಿ ಹೊಂದಿರಬೇಕೆಂದರು.

## ಕಿರು ಉದ್ದಿಮೆಯಲ್ಲಿ ಮಹಿಳೆಯರು–ಯೋಜನೆಯ ಪ್ರಗತಿ ಪುನರವಲೋಕನಾ ಕಾರ್ಯಕ್ರಮ – ಮೇ 11–12,2017



ಈ ಯೋಜನೆಯ ಪ್ರಗತಿ ಪುನರವಲೋಕನಾ ಕಾರ್ಯಕ್ರಮವನ್ನು ಕ್ರಾಸ್ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಪಾಲುದಾರ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿ ತಮ್ಮ ವರದಿಯನ್ನು ಮಂಡಿಸಿದರು. ಈ ಕಾರ್ಯಕ್ರಮ ಕಡುಬಡತನದ ಮಹಿಳೆಯರ ಆರ್ಥಿಕ ಸಬಲತೆಯ ಉದ್ದೇಶದಿಂದ ಪ್ರಾರಂಭಿಸಲಾಗಿದ್ದು, ಅವರು ತಮ್ಮ ಮಕ್ಕಳಿಗೆ ಉತ್ತಮ ಆಹಾರ, ಆರೋಗ್ಯ ಮತ್ತು ಶಿಕ್ಷಣ ನೀಡುವ ಮೂಲಕ ಯಶಸ್ಸು ಕಾಣಬೇಕು, ಇದು ಆದಾಯ ಹೆಚ್ಚಿಸುವ ಚಟುವಟಿಕೆಗಳ ಮೂಲಕ ಮಾತ್ರ ಸಾಧ್ಯ. ಶ್ರೀ ಆರನ್ ಮತ್ತು ಅವರ ತಂಡ ಆಗಮಿಸಿ ತರಬೇತಿ ನೀಡಿದರು. ಶ್ರೀಮತಿ ಆನ್ನಿ ಅನಿತಾ, ವ್ಯವಸ್ಥಾಪಕರು, ಸಮೃದ್ಧಿ ಯೋಜನೆ ಇವರು ಈ ಎರಡು ದಿನಗಳ ತರಬೇತಿಯನ್ನು ವ್ಯವಸ್ಥಿತವಾಗಿ ಸಂಯೋಜಿಸಿ ಶಿಬಿರಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಶ್ರೀ. ಕ್ಲೆಮೆಂಟ್ ಫರ್ನಾಂಡಿಸ್, ಕಾರ್ಯಕ್ರಮ ವ್ಯವಸ್ಥಾಪಕರು, ಕ್ರಾಸ್ ಇವರು ಎಲ್ಲರನ್ನು ಸ್ವಾಗತಿಸಿದರು.

## ಪೌಷ್ಟಿಕ್ ಯೋಜನೆಯ ಪ್ರಗತಿ ಪುನರವಲೋಕನಾ ಕಾರ್ಯಕ್ರಮ ಹಾಗೂ ತರಬೇತಿ ಮೇ 23–24, 2017



ಪೌಷ್ಟಿಕ್ ಯೋಜನೆಯ ಪ್ರಗತಿ ಪುನರವಲೋಕನಾ ಕಾರ್ಯಕ್ರಮ ಹಾಗೂ ತರಬೇತಿಯನ್ನು ಕ್ರಾಸ್ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಎಲ್ಲಾ ಪಾಲುದಾರ ಸಂಸ್ಥೆಗಳು ತಮ್ಮ 3 ತಿಂಗಳ ಪ್ರಗತಿ ಸಾಧನೆಯ ವರದಿಯನ್ನು ಮಂಡಿಸಿದರು. ಈ ಕಾರ್ಯಕ್ರಮದ ಮುಖಾಂತರ ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ ಹಾಗೂ ವಿವಿದ ಇಲಾಖೆಗಳಾದ ಪ್ರಾಥಮಿಕ ಆರೋಗ್ಯ ಕೇಂದ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಅಂಗನವಾಡಿ ಕೇಂದ್ರ, ಆಶಾ ಕಾರ್ಯಕರ್ತೆಯರು, ಪಂಚಾಯತು, ಸರಕಾರೇತರ ಸಂಘ ಸಂಸ್ಥೆಗಳು ಹಾಗೂ ಸಮುದಾಯದೊಂದಿಗೆ ಸೌಹಾರ್ಧಯುತ ಬಾಂಧವ್ಯ ಬೆಳೆಸುವಲ್ಲಿ ಪ್ರಗತಿ ಸಾಧಿಸಿದೆ. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ. ಸೆಬಾಸ್ಟಿಯನ್ ಫೆರ್ನಾಂಡಿಸ್ ಮತ್ತು ಪೌಷ್ಟಿಕ್ ಯೋಜನೆಯ ಯೋಜನಾಧಿಕಾರಿ ಶ್ರೀಯುತ ವರ್ಗೀಸ್‌ರವರು ಸಹಭಾಗೀ ಸಂಸ್ಥೆಗಳ ಸಾಧನೆಯ ಬಗ್ಗೆ ಪ್ರಶಂಷಿಸಿ ಯೋಜನೆಯ ಮುಂದಿನ ಹಂತಕ್ಕೆ ಮಾರ್ಗದರ್ಶನ ನೀಡಿದರು.

## ಕ್ರಾಸ್ ಸಂಸ್ಥೆಯ ನಿರ್ದೇಶಕ ಮಂಡಳಿಯ ಸಭೆ : ಮೇ 31, 2017



ಕ್ರಾಸ್ ಸಂಸ್ಥೆಯ ನಿರ್ದೇಶಕ ಮಂಡಳಿಯ ಸಭೆಯು ಕೆ.ಡಿ.ಡಿ.ಸಿ. ಸಂಸ್ಥೆ, ಕಾರವಾರದಲ್ಲಿ ಜರುಗಿತು. ಈ ಸಭೆಯ ಅಧ್ಯಕ್ಷತೆಯನ್ನು ಅತೀ ವಂದನೀಯ ಡಾ.ಜೆರಾಲ್ಡ್ ಐಸಾಕ್ ಲೋಬೋ, ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಮತ್ತು ಉಡುಪಿ ಧರ್ಮ ಕ್ಷೇತ್ರದ ಧರ್ಮಾಧ್ಯಕ್ಷರು ವಹಿಸಿ, ಸಭೆಗೆ ಆಗಮಿಸಿದ ಎಲ್ಲಾ ಆಹ್ವಾನಿತರನ್ನು ಆತ್ಮೀಯವಾಗಿ ಸ್ವಾಗತಿಸಿ ಸಭೆಯನ್ನು ಕ್ರಮ ಬದ್ಧವಾಗಿ ನಿರ್ವಹಿಸಿದರು. ಈ ಸಭೆಯಲ್ಲಿ ಕ್ರಾಸ್ ಸಂಸ್ಥೆಯ ಎಲ್ಲಾ ಚಟುವಟಿಕೆಗಳ ಅಭಿವೃದ್ಧಿ ವರದಿಯನ್ನು ಮಂಡಿಸಲಾಯಿತು. ನಿರ್ದೇಶಕ ಮಂಡಳಿಯ ಸಭೆಯನ್ನು ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿದ ಕಾರವಾರ ಧರ್ಮಕ್ಷೇತ್ರದ ಧರ್ಮಾಧ್ಯಕ್ಷರಾದ ಅತೀ ಪೂಜ್ಯನೀಯ ಡಾ. ಡೆರಿಕ್ ಫರ್ನಾಂಡಿಸ್, ಶ್ರೇಷ್ಠ ಗುರುಗಳು ಸೈಮನ್ ಟೆಲ್ಲಿಸ್, ಮತ್ತು ವಂದನೀಯ ಸ್ವಾಮಿ. ಆಂಬ್ರೋಸ್ ಫರ್ನಾಂಡಿಸ್, ನಿರ್ದೇಶಕರು ಕೆ.ಡಿ.ಡಿ.ಸಿ. ಸಂಸ್ಥೆ, ಇವರಿಗೆ ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ಫಾ. ಸೆಬಾಸ್ಟಿಯನ್ ಫರ್ನಾಂಡಿಸ್‌ರವರು, ಆತ್ಮೀಯವಾಗಿ ಅಭಿನಂದಿಸಿದರು ಹಾಗೂ ಉಪಸ್ಥಿತರಿದ್ದ ನಿರ್ದೇಶಕ ಮಂಡಳಿಯ ಸದಸ್ಯರ ಸಹಕಾರ ಸ್ಮರಿಸುತ್ತಾ ಎಲ್ಲರನ್ನು ವಂದಿಸಿದರು.

## ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಕಾರ್ಯಾಗಾರ – ಜೂನ್ 27,2017



ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ. ಸೆಬಾಸ್ಟಿಯನ್ ಫರ್ನಾಂಡಿಸ್ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಜನಸಾಮಾನ್ಯರಿಗೆ ಒದಗಿಸಬೇಕಾದ ಮೂಲಭೂತವಾದ ಕನಿಷ್ಠ ಆರೋಗ್ಯ ಸೇವೆಗಳನ್ನು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿ ಒದಗಿಸಲು ಸರಕಾರ ಪ್ರಯತ್ನ ಮಾಡಲಾಗಿದೆ. ಶಿಬಿರಾರ್ಥಿಗಳು ಈ ಶಿಬಿರದಿಂದ ಮಾಹಿತಿ ಸಂಗ್ರಹಿಸಿ ಗ್ರಾಮೀಣ ಜನರಿಗೆ ತಲಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು.

ಈ ಕಾರ್ಯಾಗಾರದಲ್ಲಿ ಸರಕಾರೇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಒಕ್ಕೂಟದ ಪ್ರತಿನಿಧಿಗಳು, ಆಶಾಕಾರ್ಯಕರ್ತರು ಸೇರಿ 60 ಮಂದಿ ಭಾಗವಹಿಸಿದ್ದರು.

ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದ ತರಬೇತಿ ತಜ್ಞ, ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐ.ಇ.ಸಿ.) ವಿಭಾಗದ ಶ್ರೀಯುತ ಕೃಷ್ಣಮೂರ್ತಿಯವರು ಈ ಕಾರ್ಯಾಗಾರವನ್ನು ನಡೆಸಿಕೊಟ್ಟರು. ಪ್ರಾಥಮಿಕ ಆರೋಗ್ಯ ಸೇವೆ, ಸಾಂಕ್ರಾಮಿಕ ರೋಗಗಳ ನಿಯಂತ್ರಣ, ಪರಿಸರ ಮತ್ತು ವೈಯಕ್ತಿಕ ಸ್ವಚ್ಛತೆ, ಶುದ್ಧ ಕುಡಿಯುವ ನೀರು ಹಾಗೂ ಪೌಷ್ಠಿಕ ಆಹಾರ ಮತ್ತು ಸಣ್ಣ–ಪುಟ್ಟ ರೋಗ–ರುಜಿನಗಳಿಗೆ ಚಿಕಿತ್ಸೆಗಳು, ಕುಟುಂಬಕಲ್ಯಾಣ ಹಾಗೂ ತಾಯಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು ಇತ್ಯಾದಿ ಪ್ರಮುಖ ಅಂಶಗಳ ಬಗ್ಗೆ ಶಿಬಿರಾರ್ಥಿಗಳಿಗೆ ಮಾಹಿತಿ ನೀಡಿದರು.

## ಲಿಂಗತ್ವದ ಬಗ್ಗೆ ಕಾರ್ಯಾಗಾರ – ಜೂನ್ 28, 2017



ಕ್ರಾಸ್ ಸಂಸ್ಥೆಯಲ್ಲಿ ಲಿಂಗತ್ವದ ಬಗ್ಗೆ ಒಂದು ದಿನದ ಕಾರ್ಯಾಗಾರವನ್ನು ನಡೆಸಲಾಯಿತು. ಕರ್ನಾಟಕದ ವಿವಿಧ ಧರ್ಮಕ್ಷೇತ್ರಗಳಿಂದ 60 ಮಂದಿ ಶಿಬಿರಾರ್ಥಿಗಳು ಈ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ. ಸೆಬಾಸ್ಟಿಯನ್ ಫರ್ನಾಂಡಿಸ್‌ರವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಮಹಿಳಾ ಅಭಿವೃದ್ಧಿಗೆ ಲಿಂಗ ಸಮಾನತೆಯ ಪ್ರಾಮುಖ್ಯತೆಯ ಬಗ್ಗೆ ವಿವರಿಸಿದರು. ಪುರುಷ ಮತ್ತು ಮಹಿಳೆ ಒಗ್ಗೂಡಿ ದುಡಿಯುವುದರೊಂದಿಗೆ ಸಾಮಾಜಿಕ ಪರಿವರ್ತನೆ ಸಾಧ್ಯ ಎಂದರು.

ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದ ತರಬೇತಿ ತಜ್ಞ, ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐ.ಇ.ಸಿ.) ವಿಭಾಗದ ಶ್ರೀಯುತ ಕೃಷ್ಣಮೂರ್ತಿಯವರು ಈ ಕಾರ್ಯಾಗಾರವನ್ನು ನಡೆಸಿಕೊಟ್ಟರು. ಲಿಂಗ ತಾರತಮ್ಯ ವ್ಯವಸ್ಥೆ, ಲಿಂಗತ್ವ ಪರಿಕಲ್ಪನೆ, ಲಿಂಗತ್ವದ ಸಂಬಂಧಗಳು ಹಾಗು ಲಿಂಗ ಅಸಮಾನತೆಯ ಪರಿಣಾಮಗಳು, ಸಾಮಾಜಿಕ ಮತ್ತು ಕೌಟುಂಬಿಕ ಜೀವನದಲ್ಲಿ ಎದುರಿಸುವ ಹಲವಾರು ಸಮಸ್ಯೆಗಳಿಗೆ ಕಾರಣಗಳ ಬಗ್ಗೆ ತಿಳಿದುಕೊಳ್ಳಬೇಕಾದ ಅಗತ್ಯವಿದೆ ಎಂದರು.

MISEREOR
IHR HILFSWERK

ಪ್ರತಿಗಳಿಗಾಗಿ ಸಂಪರ್ಕಿಸಿ :

**ಕರ್ನಾಟಕ ರೀಜನಲ್ ಆರ್ಗನೈಝೇಷನ್ ಫಾರ್ ಸೋಶಿಯಲ್ ಸರ್ವೀಸ್ (ಕ್ರಾಸ್)**

ಅಂಚೆ ಪೆಟ್ಟಿಗೆ – 8427 ನಂ. 58/6 , 2ನೇ ಅಡ್ಡ ರಸ್ತೆ, ಡಕೋಸ್ಟ ಲೇಔಟ್, ವೀಲರ್ ರೋಡ್ ಬಡಾವಣೆ,
ಬೆಂಗಳೂರು 560084. ದೂರವಾಣಿ ಸಂಖ್ಯೆ : 080– 25496812/13, ಇ–ಮೇಲ್ : krossdir@gmail.com
ವೆಬ್‌ಸೈಟ್ : www.krossbangalore.com